Nandihalli Tank.

*Q.—457. Smt. SIDDAMMA MAILAR (Byadgi).—

Will the Government be pleased to state :—

(*a*) when the work of the Nandihalli Tank in Byadgi Taluk would commence ;

(*b*) the estimated cost of the said work ;

(*c*) the extent of land to be irrigated under this tank ?

A.—Sri ALUR HANUMANTHAPPA (Deputy Minister for Minor Irrigation).—

(*a*) After the plans and estimates are sactioned and funds provided.

(*b*) Rs. 7,82,100.

(*c*) 1,420 acres.

ಶ್ರೀಮತಿ ಸಿದ್ದಮ್ಮ ಮೈಲಾರ.—ನಕ್ಷೆ ಹಾಗೂ ಅಂದಾಜುಗಳನ್ನು ಮಂಜೂರ್ಮಾಡಿ ಹಣವನ್ನೊದಗಿಸಿದ ನಂತರ ಈ ಕಾಮಗಾರಿಯನ್ನು ಕೈಗೊಳ್ಳಲಾಗುವುದು ಎಂದು ಉತ್ತರ ಹೇಳಿದ್ದೀರಿ. ಜವಾಬ್ದಾರೀ ಸ್ಥಾನದಲ್ಲಿರುವವರು ಹೀಗೆ ಹೇಳುವುದು ಸರಿಯೇ ?

ಶ್ರೀ ಆಲೂರು ಹನುಮಂತಪ್ಪ.—ಈ ವರ್ಷ ಬಜೆಟ್ಟಿನಲ್ಲಿ ಹಣ ಒದಗಿಸಿಲ್ಲ. ಎಸ್ಟಿಮೇಟು ರೆಡಿಯಾಗಿದೆ. ಹಣ ಒದಗಿಸಿದ ನಂತರ ಕೆಲಸ ಮಾಡಿಸಲಾಗುವುದು.

ಶ್ರೀಮತಿ ಸಿದ್ದಮ್ಮ ಮೈಲಾರ.—ಮೂರನೇ ಯೋಜನೆ ಮುಗಿಯುವುದರೊಳಗಾಗಿ ಇದನು ಬಜೆಟ್ಟಿನಲ್ಲಿ ಸೇರಿಸುತ್ತೀರಾ ?

ಶ್ರೀ ಆಲೂರು ಹನುಮಂತಪ್ಪ.—ಇದೊಂದು ಒಳ್ಳೆಯ ಯೋಜನೆ ಆಗಿದೆ. 1,420 ಎಕರೆ ಜಮೀನು ನೀರಾವರಿಯಾಗುತ್ತದೆ. ಆದಷ್ಟು ಬೇಗನೆ ಮಾಡಬೇಕೆಂದು ಸರಕಾರದ ಆಶಯವಾಗಿದೆ.

Dispensaries in Malnad area.

*Q.—475. Sri R. S. HEGDE (Honnavar).—

Will the Government be pleased to state :—

(*a*) whether they are aware that unlike other parts of the State where there could be a human dispensary for a population of 15,000 that in the Malnad area there should be one for a population of 7 to 8 thousand ;

(*b*) whether any action has been taken on the basis of one dispensary for 7 to 8 thousand people in the North Kanara District ;

(*c*) what is the total period required for the full implementation of the scheme of having a dispensary for a population of 7 to 8 thousand;

(*d*) whether they are aware that on account of the special communication difficulties North Kanara District deserves special treatment in the matter of affording medical facilities to the people ?

A.—Sri K. NAGAPPA ALVA (Minister for Health).—

(*a*) Yes.

(*b*) Action is being taken.

(*c*) Cannot be anticipated.

(*d*) North Kanara District will be treated on par with other Districts.

Sri R. S. HEGDE.—May I know whether a Government Order wa issued by the Government that a Dispensary should be there for a population of 7 to 8 thousand instead 15,000 population ?

Sri K. NAGAPPA ALVA.—It is not an Order. That was just a decision. Wherever a Dispensary or a Health Centre is found necessary, Government will take that decision.

Sri R. S. HEGDE.—May I know whether any survey was made, if made when and if not made why, not ?

Sri K. NAGAPPA ALVA.—Survey has been made in regard to areas covering 15 thousand population. But the other District representatives and others have been requested to represent whether it is necessary that Health units should be established in any centres for lesser population.

ಶ್ರೀ ಎಸ್. ಎಂ. ಗುರೆಡ್ಡಿ.—ಡಾಕ್ಟರುಗಳ ಕೊರತೆ ಹೆಚ್ಚಾಗಿರುವಾಗ್ಗೆ ಡಾಕ್ಟರುಗಳು ಇಲ್ಲದಿರುವ ಇಂಥ ದವಾಖಾನೆಗಳು ಕೇವಲ ನಿರುಪಯೋಗಿ ಆಗಿವೆ ಎಂಬುದು ಸರಕಾರಕ್ಕೆ ಗೊತ್ತಿದೆಯೇ?

ಶ್ರೀ ನಾಗಪ್ಪ ಆಳ್ವ.—ಎಲ್ಲಿಯೇ ಆಸ್ಪತ್ರೆ ಇರಲಿ ಅಲ್ಲಿ ಡಾಕ್ಟರರು ಹೋಗುವಂತೆ ಮಾಡುವುದು ಸರಕಾರದಕೆಲಸವಾಗಿದೆ.

ಶ್ರೀ ಎಸ್. ಎಂ. ಗುರೆಡ್ಡಿ.—ಆಸ್ಪತ್ರೆಯಲ್ಲಿ ಡಾಕ್ಟರರು ಇಲ್ಲದೇ ಇರುವುದರಿಂದ ರೋಗಿಗೆ ಔಷಧಿ ದೊರೆಯದೆ ಇಂಥ ಆಸ್ಪತ್ರೆಗಳು ನಿರುಪಯೋಗಿ ಆಗಿವೆ ಎನ್ನುವುದು ಸರಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ನಾಗಪ್ಪ ಆಳ್ವ.—ನಿರುಪಯೋಗಿ ಎಂದು ಹೇಳುವುದಕ್ಕಾಗುವುದಿಲ್ಲ. ಕೆಲವು ಕಡೆ ಡಾಕ್ಟರರು ಇಲ್ಲ. ಆದರಿಂದ ಸ್ವಲ್ಪ ಅನನುಕೂಲವಾಗಿದೆ.

ಶ್ರೀ ಎಸ್. ಪಿ ಫಾಯದೆ.—ಅಲೋಪಥಿ ಡಾಕ್ಟರರು ಸಿಕ್ಕುವುದಿಲ್ಲವಾದ್ದರಿಂದ ಆಯುರ್ವೇದ ಡಾಕ್ಟರುಗಳ ನೇಮಕ ಮಾಡಬೇಕೆಂದು ಸರಕಾರಕ್ಕೆ ಮನವಿ ಬಂದಿವೆಯೇ ?

ಶ್ರೀ ಕೆ. ನಾಗಪ್ಪ ಆಳ್ವ.—ಇದು ಸರಕಾರದ ಪರಿಶೀಲನೆಯಲ್ಲಿದೆ.

ಶ್ರೀಮತಿ ಸುಶೀಲಾಬಾಯಿ ಹಿರಾಚೆಂದ್ ಷಾ.—ಕೆಲವು ತಾಲ್ಲೂಕುಗಳಲ್ಲಿ ಇರುವ ಆಸ್ಪತ್ರೆಗಳಲ್ಲಿ ಎರಡು ಮೂರು ವರ್ಷಗಳಿಂದ ಡಾಕ್ಟರರು ಇಲ್ಲ. ಇದರ ಬಗ್ಗೆ ಯಾವ ಕ್ರಮ ತೆಗೆದುಕೊಂಡಿಲ್ಲ. ಡಾಕ್ಟರು ಇಲ್ಲದೆ ಮೂಲಕ ಔಷಧಿ ದೊರೆಯುವುದಿಲ್ಲ. ಇಂಥ ಆಸ್ಪತ್ರೆಗಳಿಗೆ ಒದಗಿಸಿದ ದುಡ್ಡು ಹಾಳಾಗಿ ಹೋಗುತ್ತಿದೆ ಎನ್ನುವುದು ಸರಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ನಾಗಪ್ಪ ಆಳ್ವ.—ಸರಕಾರದ ಗಮನಕ್ಕೆ ಬಂದಿಲ್ಲ. ಡಾಕ್ಟರರು ಇಲ್ಲದೇ ಇರುವ ಆಸ್ಪತ್ರೆಗೆ ಸಮೀಪದಲ್ಲರುವ ಆಸ್ಪತ್ರೆಯ ಡಾಕ್ಟರರು ವಾರಕ್ಕೆ ಒಂದೆರಡು ಸಲ ಹೋಗುವ ವ್ಯವಸ್ಥೆ ಮಾಡಿದೆ.

Sri J. P. SARVESH.—May I know the reason for not encouraging Ayurvedic Dispensaries in the State, Sir ?

Sri K. NAGAPPA ALVA.—We are encouraging Ayurvedic medicines in the State.

ಶ್ರೀ ಸಿದ್ದಯ್ಯ ಕಾಶೀಮಠ.—15,000 ಜನಸಂಖ್ಯೆಗೆ ಒಂದು ಆಸ್ಪತ್ರೆ ಇರಬೇಕೆಂದು ಸರಕಾರ ಗೊತ್ತು ಮಾಡಿದೆಯಲ್ಲವೇ ?

ಶ್ರೀ ಕೆ. ನಾಗಪ್ಪ ಆಳ್ವ.—ಹಾಗೆ ಮಾಡಿದೆ. ಆಸ್ಪತ್ರೆಯ ಅವಶ್ಯಕತೆ ಇದೆ ಎಂದು ತಾಲ್ಲೂಕ. ಬೋರ್ಡು ಸರಕಾರಕ್ಕೆ ತಿಳಿಸಿದರೆ ಅಲ್ಲ ಒಂದು ಹೆಲ್ತ್‌ಯುನಿಟ್ ಡಿಸ್ಪೆನ್ಸರಿ ಮಾಡುವ ಯೋಜನೆ ಇದೆ.

ಶ್ರೀ ಎಫ್. ಎಸ್. ತಾವರೆ.—ಡಾಕ್ಟರರು ತಹರುಗಳಲ್ಲಿ ಇರಲು ಬಯಸುತ್ತಾರೆ, ಹಳ್ಳಿಗಳಿಗೆ ಹೋಗುವುದಿಲ್ಲ. ಅವರು ಹಳ್ಳಿಗಳಿಗೆ ಹೋಗುವಂತೆ ನಿರ್ಬಂಧ ಹಾಕುತ್ತೀರಾ ?

ಶ್ರೀ ಕೆ. ನಾಗಪ್ಪ ಆಳ್ವ.—ಕೆಲವು ನಿರ್ಬಂಧ ಹಾಕುತ್ತಿದ್ದೇವೆ. ಎಲ್ಲ ಡಾಕ್ಟರರನ್ನು ಪಟ್ಟಣ ದಲ್ಲಿ ಇಟ್ಟುಕೊಳ್ಳುವುದಿಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ಇಂಟಿಗ್ರೇಟೆಡ್ ಕೋರ್ಸ್ ಇಂಟ್ರಡ್ಯೂಸ್ ಮಾಡಿ ಅವರನ್ನು ನೇಮಕ ಮಾಡಲು ಇರುವ ಆಂತಕವನ್ನು ದೂರಮಾಡಿ ಅವರನ್ನು ತೆಗೆದುಕೊಳ್ಳುತ್ತೀರಾ ?

ಶ್ರೀ ಕೆ. ನಾಗಪ್ಪ ಆಳ್ವ.—ಸರಕಾರ ಅದನ್ನು ಪರಿಶೀಲನೆ ಮಾಡುತ್ತಿದೆ.

ಶ್ರೀ ಎಸ್. ಪಿ. ಹಾಯದೆ.—ಉತ್ತರಕನ್ನಡ ಜಿಲ್ಲೆಯಲ್ಲಿ ಎಷ್ಟು ದವಾಖಾನೆಗಳಿವೆ ? ಆ ಹೈಕಿ ಎಷ್ಟೆರೆಲ್ಲಿ ಡಾಕ್ಟರುಗಳಿಲ್ಲ ?

ಶ್ರೀ ಕೆ. ನಾಗಪ್ಪ ಆಳ್ವ.—ಅಲ್ಲಿ 73 ದವಾಖಾನೆಗಳಿವೆ. ಅದರ ಎಷ್ಟು ದವಾಖಾನೆಗಳಲ್ಲಿ ಡಾಕ್ಟರುಗಳಿಲ್ಲ ಎಂಬ ವಿಚಾರ ಈಗ ನನ್ನ ಬಳಿ ಇಲ್ಲ.

———

Vehicles that are out of order in P. W. D. Division, Davangere.

*Q.—432. Sri G. T. RANGAPPA (Hosadurga).—

Will the Government be pleased to state :—

(*a*) the number of vehicles that are out of order in the P. W. D. Division, Davangere and since when ;

(*b*) what they propose to do with such vehicles ;

(*c*) the amount spent for the repairs of the vehicles so far ?

A.—Sri G. B. SHANKAR RAO.—(Parliamentary Secretary to the Minister for Public Works).—

(*a*) 20 Since 3 to 10 years.

(*b*) 9 vehicles have already been auctioned. 7 vehicles are proposed to be got repaired and put into use. The remaining 4 vehicles are proposed for being disposed of in auction.

(*c*) No expenditure has been incurred so far.

ಶ್ರೀ ಜಿ. ಟಿ. ರಂಗಪ್ಪ.—ಇಲ್ಲಿ ತಿಳಿಸಿರತಕ್ಕ 7 ವಾಹನ ಕೆಟ್ಟು ಹೋಗಿ ಎಷ್ಟು ವರ್ಷಗಳು ಆಯಿತು?

ಶ್ರೀ ಜಿ. ಬಿ. ಶಂಕರರಾವ್.—3 ರಿಂದ ಹತ್ತು ವರ್ಷಗಳಾಗಿವೆ ಎಂದು ಉತ್ತರದಲ್ಲೇ ತಿಳಿಸಿದೆ.

ಶ್ರೀ ಜಿ. ಟಿ. ರಂಗಪ್ಪ.—ನಾನು ಕೇಳುತ್ತಿರುವುದು ಈ 7 ವಾಹನಗಳು ಕೆಟ್ಟು ಹೋಗಿ ಎಷ್ಟು ವರ್ಷಗಳಾಯಿತು ಎಂದು?

ಶ್ರೀ ಜಿ. ಬಿ. ಶಂಕರರಾವ್.—ಪ್ರತಿಯೊಂದು ವಾಹನವೂ ಕೆಟ್ಟು ಹೋಗಿ ಎಷ್ಟು ವರ್ಷ ಗಳಾದುವೆಂಬುದನ್ನು ತಿಳಿಸುವುದಕ್ಕಾಗುವುದಿಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ಇಲ್ಲಿ ಸರ್ಕಾರದವರು ಕೊಟ್ಟಿರತಕ್ಕ ಉತ್ತರದಲ್ಲಿ 9 ವೆಹಿಕಲ್ಲನ್ನು ಹರಾಜು ಮಾಡಲಾಯಿತು. ಇನು 7 ವೆಹಿಕಲ್‌ಗಳನ್ನು ರಿಪೇರಿ ಮಾಡಬೇಕೆಂದಿದೆ. ಇನ್ನುಳಿದ 4ನ್ನು ಹರಾಜು ಮೂಲಕ ವಿಲೇವಾರಿ ಮಾಡಬೇಕೆಂದಿದೆ ಎಂದು ಉತ್ತರದಲ್ಲಿ ತಿಳಿಸಲಾಗಿದೆ. ಈ ರೀತಿ ಸಿಕ್ಕಾಗಿರತಕ್ಕ ವೆಹಿಕಲ್‌ಗಳಿಂದ ಸರ್ಕಾರಕ್ಕೆ ಬಹಳ ಹಣ ದುರುಪಯೋಗವಾಗುತ್ತಿದೆ ಎಂಬುದು ಸರ್ಕಾರದವರಿಗೆ ಗೊತ್ತಿದೆಯೇ!